O.S.207/2018 PW2

**<u>ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ</u>**
<u>ಅಸಲು ದಾವಾ ಸಂ. 207/2018 P.W.-2</u>

ಈ ದಿನ ದಿಃ03.01.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ</u>** <u>ವಾದಿ ಪರ ವಕೀಲರಿಂದಃ</u>

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸುತ್ತಿದ್ದೇನೆ. ಅದನ್ನು ಓದಿ, ತಿಳಿದು, ಸಹಿ ಮಾಡಿರುತ್ತೇನೆ. ಅದರಲ್ಲಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ.

ಸಾಕ್ಷಿಗೆ ನಿಪಿ3 ಮತ್ತು 5 ನ್ನು ತೋರಿಸಲಾಗಿ ಅದರಲ್ಲಿ ತನ್ನ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ಕ್ರಮವಾಗಿ ನಿಪಿ.3 ಎ ಮತ್ತು 5 ಎ ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ4 ನೋಟೀಸ್ ಅನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲು ಃ</u>** <u>ಪ್ರತಿವಾದಿಯ ಪರವಾಗಿ ಶ್ರೀ ಬಿ ಪಿ ಆರ್ ವಕೀಲರಿಂದ</u> ಃ-

ನಾನು ಬಾಂದುದಾರರ ಮುಖಾಂತರ ನೋಟೀಸ್ ಅನ್ನು ಕಳುಹಿಸಿರುತ್ತೇವೆ. ಮೋಜಿನಿಗೆ ಅರ್ಜಿಯನ್ನು ಸಲ್ಲಿಸುವಾಗ ಹಿತಾಸಕ್ತಿದಾರರಿಗೆ ನೋಂದಣಿ ಅಂಚೆ ಮೂಲಕ ನೋಟೀಸ್ ಅನ್ನು ಕಳುಹಿಸಬಹುದು ಎಂದು ಇದೆ. ನನಗೆ ನೋಂದಣಿ ಅಂಚೆ ಮೂಲಕ ಹಿತಾಸಕ್ತಿದಾರರಿಗೆ ನೋಟೀಸ್ ಅನ್ನು ಕಳುಹಿಸಲು ಯಾವುದೇ ತೊಂದರೆ ಇರಲಿಲ್ಲ. ಸಾಕ್ಷಿ ಮುಂದುವರೆದು ನಾನು ಬಾಂದು ಜವಾನರ ಮೂಲಕ ನೋಟೀಸ್ ಅನ್ನು ಜಾರಿ ಮಾಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ4 ರ ದಾಖಲೆಯಂತೆ ಹದ್ದುಬಸ್ತು ಅಳತೆ ಮಾಡಲು ನೀಡಿದ ಅರ್ಜಿಯಲ್ಲ ಎಂದರೆ ಸರಿ. ನಿಪಿ4 ರ ದಾಖಲೆಯು 11 ಇ ನಕಾಶೆ ತಯಾರಿಸಲು ನೀಡಿದಂತಹ ಅರ್ಜಿಗೆ ಸಂಬಂಧಪಟ್ಟ ದಾಖಲೆ ಎಂದರೆ ಸರಿ.

11 ಇ ನಕಾಶೆಗೆ ಅರ್ಜಿ ಕೊಟ್ಟ ಸಮಯದಲ್ಲಿ ನಮಗೆ ಹದ್ದುಬಸ್ತು ನಕಾಶೆ ತಯಾರಿಸಲು ನಮ್ಮ ಸರ್ವೇ ಮ್ಯಾನುಯಲ್ ನಲ್ಲಿ ಅವಕಾಶ ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಿಪಿ5.ರ ದಾಖಲೆಯು ಹದ್ದುಬಸ್ತು ನಕಾಶೆಯಲ್ಲ ಎಂದು ನುಡಿಯುತ್ತಾರೆ. 11 ಇ ನಕಾಶೆಗೆ ಅರ್ಜಿ ಕೊಟ್ಟ ಸಮಯದಲ್ಲಿ ನಾನು ನಿಪಿ5 ರಂತೆ ಒತ್ತುವರಿ ತೋರಿಸಿ ಅಳತೆ ಮಾಡಲು ಬರುವುದಿಲ್ಲ ಎಂದರೆ ಸಾಕ್ಷಿಯು ನಾನು ಒತ್ತುವರಿಯನ್ನು ತೋರಿಸಿರುವುದಿಲ್ಲ ಎಂದು ನುಡಿಯುತ್ತಾರೆ.

ಸರ್ವೇ ನಂಬರ್ 119/1 ರ ಪಹಣಿಯಲ್ಲಿ ಎಲ್ಲಾ ಹಿಡುವಳಿದಾರರನ್ನು ಒಟ್ಟಿಗೆ ತೋರಿಸಿರುತ್ತಾರೆ ಎಂದರೆ ಸರಿ. ನಿಪಿ2 ರಂತೆ ವಾದಿ ಮತ್ತು ಪ್ರತಿವಾದಿಯರ ಹೆಸರುಗಳು ಒಟ್ಟಿಗೆ ಬರುತ್ತಿದೆ ಎಂದರೆ ಸರಿ. ಹದ್ದುಬಸ್ತು ಅರ್ಜಿ ನೀಡುವ ಮೊದಲು ವಾದಿಯ ಹೆಸರಿಗೆ ಪ್ರತ್ಯೇಕ ಪಹಣಿ ಬರಬೇಕಾಗುತ್ತದೆ ಎಂದರೆ ಸರಿ. ಆ ರೀತಿ ಪೋಡಿಯಾಗದೇ ಹದ್ದುಬಸ್ತು ಮಾಡಲು ಬರುವುದಿಲ್ಲ ಎಂದರೆ ಸರಿ. ಹಾಗಾಗಿ ಹದ್ದುಬಸ್ತು ಮಾಡಲು ಸಾಧ್ಯ ಇಲ್ಲ ಮತ್ತು ಯಾರು ಯಾರು ಎಷ್ಟು ಅಳತೆ ಜಮೀನಿನಲ್ಲಿಇರುತ್ತಾರೆಂದು ತೋರಿಸಲು ಬರುವುದಿಲ್ಲ ಎಂದರೆ ಸಾಕ್ಷಿ ನಾನು ಅನುಭವದಂತೆ ನಕಾಶೆ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ5 ರಲ್ಲಿ ನಾನು ಯಾವ ಆಧಾರದ ಮೇರೆ ವಾದಿಯು 14 ಗುಂಟೆ ಕಡಿಮೆ ಅಳತೆಯ ಜಮೀನಿನ ಸ್ವಾಧೀನದಲ್ಲಿ ಇರುತ್ತಾರೆಂದು ತೋರಿಸಿರುತ್ತೇನೆ ಎಂದರೆ ಸರ್ವೇ ದಾಖಲೆಗಳ ಆಧಾರದ ಮೇಲೆ ತೋರಿಸಿರುತ್ತೇನೆ ಎಂದು ನುಡಿಯುತ್ತಾರೆ. ಸರ್ವೇ ನಂಬರ್ 119/1 ನಮ್ಮ ಸರ್ವೇ ದಾಖಲೆಗಳಲ್ಲಿ ಪಹಣಿಯಲ್ಲಿ ತೋರಿಸಿರುವಂತೆ ವಾದಿಗೆ ಪ್ರತ್ಯೇಕವಾಗಿ ಪೋಡಿ ಆಗಿರುವುದಿಲ್ಲ ಎಂದರೆ ಸರಿ. ಯಾವುದೇ ಪೋಡಿಯಾಗದೇ ವಾದಿಯ ಜಮೀನಿಗೆ ಸಂಬಂಧಪಟ್ಟಂತೆ ಹದ್ದುಬಸ್ತು ಮಾಡಲು ಬರುವುದಿಲ್ಲ ಎಂದರೆ ಸರಿ. ಹದ್ದುಬಸ್ತು ಮಾಡದೇ ಒತ್ತುವರಿಯನ್ನು ತೋರಿಸಲು ಬರುವುದಿಲ್ಲ ಎಂದರೆ ಸರಿ. ನಿಪಿ5 ರ ನಕಾಶೆಯಲ್ಲಿ ಯಾರು ಯಾರು ಎಷ್ಟು ಒತ್ತುವರಿ ಮಾಡಿರುತ್ತಾರೆಂದು ನಮೂದು ಮಾಡಿಲ್ಲ ಎಂದರೆ ಸರಿ. 5 ನೇ ಬ್ಲಾಕ್ ನ ಕೆ ಎಂ ಚಂದ್ರಪ್ಪನವರ ಪೂರ್ವ ದಿಕ್ಕಿಗೆ ವಾದಿಯ ಆಸ್ತಿ ಬರುತ್ತದೆ ಎಂದು ತೋರಿಸಿರುತ್ತೇನೆ ಎಂದರೆ ಸರಿ.

ಸರ್ವೇ ನಂಬರ್ 119/1 ರಲ್ಲಿನ ಹಿಸ್ಸಾ ದಾರರು ತಮ್ಮ ಕ್ರಯಪತ್ರಗಳನ್ನು ಹಾಗೂ ದಾಖಲೆಗಳನ್ನು ಹಾಜರು ಮಾಡಿದರು ಸಹ ಅದರಲ್ಲಿ ನಮೂದು ಮಾಡಿದಂತೆ ಹಿಸ್ಸೆ ಹಾಗೂ ಚಕ್ಕುಬಂದಿಯನ್ನು ತೋರಿಸಿ ನಿಪಿ5 ರಂತೆ ನಾನು ನಕಾಶೆಯನ್ನು ತಯಾರು ಮಾಡಿಲ್ಲ ಎಂದರೆ ಸಾಕ್ಷಿ ಸದರಿಯವರು ನನಗೆ ಯಾವುದೇ ದಾಖಲೆ ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ಸರ್ವೇ ನಂಬರ್ 119/1 4 ಎಕರೆ 3 ಗುಂಟೆ ಅದರಲ್ಲಿ 3 ಕಾಲು ಗುಂಟೆ ಬಿ ಖರಾಬು ಇರುತ್ತದೆ. ನಿಪಿ5 ನ್ನು ತಯಾರು ಮಾಡುವ ಮುಂಚೆ ಸದರಿ ಖರಾಬು ಉತ್ತಾರನ್ನು ತೆಗೆದುಕೊಂಡು ಹೋಗಿರುತ್ತೇನೆ. ಸದರಿ ಜಮೀನಿನ ದಕ್ಷಿಣದ ಹಂಚಿನಲ್ಲಿ ಕುಡ್ಲೂರಿನಿಂದ ಕೊರಟಿಕೆರೆಗೆ ಹೋಗುವ ರಸ್ತೆ ಇದೆ ಎಂದರೆ ಸರಿ. ಸದರಿ ರಸ್ತೆಯು ಸದರಿ

ಜಮೀನಿನ ಒಳಗೆ ಬರುತ್ತದೋ ಇಲ್ಲವೋ ಎಂದು ನಾನು ಅಳತೆ ಮಾಡಿರುವುದಿಲ್ಲ. ನಾನು ನೋಂದಣಿ ಅಂಚೆ ಮೂಲಕ ನೋಟೀಸ್ ಅನ್ನು ಜಾರಿ ಮಾಡಲು ಅವಕಾಶ ಇದ್ದರೂ ಸಹ ನಾನೇ ಉದ್ದೇಶ ಪೂರ್ವಕವಾಗಿ ಬಾಂದು ಜವಾನರ ಮೂಲಕ ಸದರಿ ನೋಟೀಸ್ ಅನ್ನು ಜಾರಿ ಮಾಡಿ ಕಚೇರಿಯಲ್ಲಿ ಕುಳಿತು ಸದರಿ ನೋಟೀಸ್ ಅನ್ನು ಷರಾವನ್ನು ಬರೆಸಿರುತ್ತೇನೆ ಎಂದರೆ ಸರಿಯಲ್ಲ.

ಪೋಡಿಯಾಗದೇ ಹಿಸ್ಸಾದಾರರು ಇಂತಿಷ್ಟು ಅಳತೆಯ ಜಮೀನಿನಲ್ಲಿ ಸ್ವಾಧೀನದಲ್ಲಿ ಇರುತ್ತಾರೆಂದು ನಿಪಿ5 ರಂತೆ ನಾನು ತಪ್ಪು ವರದಿಯನ್ನುನೀಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.

(ಸಂತೋಷ್ ಕುಮಾರ್ ಪಿ. ಎಸ್.)
ಸಿವಿಲ್ ನ್ಯಾಯಾಧೀಶರು ಮತ್ತು ಹೆ:ಪ್ರ.ದ.ನ್ಯಾ.ದಂ.ರವರು,
ತರೀಕೆರೆ.